**ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕಃ 04-07-2025**
**ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀಮತಿ. ಆರ್ ಎಮ್ ಎಚ್ ವಕೀಲರಿಂದಃ**

1. ಟಿ.ಪಿ.ಸಿ ನಂ.1062 ಇದು ಖುಲ್ಲಾ ಜಾಗೆ ಎಂದರೆ ಸರಿ. ಸದರಿ ಟಿ.ಪಿ.ಸಿ ನಂ.1062 ಇದಕ್ಕೆ 1ನೇ ಪ್ರತಿವಾದಿಯು ಮಾಲೀಕರು ಎಂದರೆ ಸರಿ. ಸದರಿ ಟಿ ಪಿ ಸಿ ನಂ.1062 ನೇದ್ದಕ್ಕೆ ಮೊದಲು ಪ್ರತಿವಾದಿ ನಂ.1 ಇವರ ತಾಯಿ ಶೋಬಾಬಾಯಿ ನಾಗೇಶರಾವ ದೇಸಾಯಿ @ ಸರ್ ದೇಸಾಯಿ ಇವರ ಹೆಸರು ಇತ್ತು ನಂತರ ಅವರು ಮರಣ ಹೊಂದಿದ ಮೇಲೆ ಪ್ರತಿವಾದಿ ನಂ.1 ಇವರ ಹೆಸರು ದಾಖಲಾಯಿತು ಎಂದರೆ ಸರಿ. ಶೋಬಾಬಾಯಿ ನಾಗೇಶರಾವ ದೇಸಾಯಿ @ ಸರ್ ದೇಸಾಯಿ ಇವರು ಜೀವಂತ ಇದ್ದಾಗ ಸದರಿ ಟಿಪಿಸಿ ನಂ.1062ನೇದ್ದಕ್ಕೆ ಸಂಬಂದಿಸಿದಂತೆ ಛತ್ರಪತಿ ಶಿವಾಜಿ ವ್ಯಾಯಾಮ ಶಾಲೆ ಇವರು ಮತ್ತು ಕೆಲವು ವ್ಯಕ್ತಿಗಳು ಮತ್ತು ಟಿ ಎಮ್ ಸಿ ಖಾನಾಪೂರ ಅಸಲು ದಾವಾ ನಂ.21/1977 ನೇದ್ದನ್ನು ಮನ್ಸಿಪ ಕೋರ್ಟ ಖಾನಾಪೂರದಲ್ಲಿ ದಾಖಲು ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಟೌನ ಮುನ್ಸಿಪಲ್ ಪ್ರತಿವಾದಿ ನಂ.9 ಎಂದು ಪಕ್ಷಗಾರರನ್ನಾಗಿ ಮಾಡಲಾಗಿತ್ತು ಎಂದರೆ ಸರಿ. ಟಿಪಿಸಿ ನಂ.1062 ನೇದ್ದರ ದಾಖಲೆಯ ಅನುಬೋಗದಾರನ ಕಾಲಂ ನಲ್ಲಿ ಅನಧಿಕೃತವಾಗಿ ಸಾರ್ವಜನಿಕ ತಾಲಿಮ ಖಾನಾ ವ್ಯಾಯಾಮ ಶಾಲೆ ಎಂದು ದಾಖಲಾಗಿದ್ದನ್ನು ತೆಗೆಯಬೇಕೆಂದು ಮುನ್ಸಿಪಾಲಿಟಿಯನ್ನು ಪ್ರತಿವಾದಿ ನಂ.9 ರ ವಿರುದ್ಧ ವಾದಿಯು ಪರಿಹಾರ ಕೇಳಿದ್ದರು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಅಸಲು ದಾವಾ ನಂ.21/1977 ನಿರ್ಣಯ ಆಗುವ ಪೂರ್ವದಲ್ಲಿ ಮುನ್ಸಿಪಾಲಿಟಿಯವರು ಅಧಿಕೃತವಾಗಿ ದಾಖಲಾದ ಸಾರ್ವಜನಿಕ ತಾಲಿಮು ಖಾನಾ ವ್ಯಾಯಾಮ ಶಾಲೆ ಹೆಸರನ್ನು ತೆಗೆದು ಹಾಕಿ ಆ ಬಗ್ಗೆ ವಾದಿಗೆ ದಾಖಲೆಯನ್ನು ಪೂರೈಸಿದ್ದರಿಂದ ಸದರಿ ದಾವೆಯಲ್ಲಿ ಮುನ್ಸಿಪಾಲಿಟಿ ಅಂದರೆ ಪ್ರತಿವಾದಿ ನಂ.1 ರ ವಿರುದ್ಧ ಕ್ಲೇಮು ಬೇಡ ಎಂದು ವಾದಿಯು ಹೇಳಿದ್ದರು ಎಂದರೆ ಆ ವಿಷಯ ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿದ ವಿಷಯ ಅಸಲು ದಾವಾ ನಂ.21/1977 ರಲ್ಲಿಯ ತೀರ್ಪಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

2. ಅಸಲು ದಾವಾ ನಂ.21/1977 ಇದು 21-07-1984 ರಲ್ಲಿ ತೀರ್ಪು ಆಗಿರುತ್ತದೆ ಆ ನಂತರ ಸದರಿ ಟಿಪಿಸಿ ನಂ.1062ನೇದ್ದರಲ್ಲಿ ಯಾವುದಾದರು ಬದಲಾವಣೆಗಳನ್ನು ಮಾಡಿದ್ದಿರಾ

ಎಂದರೆ ಸಾಕ್ಷಿಯು ಮೊದಲಿನಿಂದಲು ಸಾರ್ವಜನಿಕ ತಾಲಿಮು ಖಾನಾ ವ್ಯಾಯಾಮ ಶಾಲೆ ಹೆಸರು ಇದೆ ಎನ್ನುತ್ತಾರೆ. ದಾಖಲೆಗಳಲ್ಲಿ ಬದಲಾವಣೆ ಮಾಡಬೇಕಾದರೆ ನಾವು ಠರಾವು ಅಥವಾ ಆದೇಶದ ಆಧಾರದ ಮೇಲೆ ಮಾಡುತ್ತೇವೆ ಎಂದರೆ ಸರಿ. ಟಿಪಿಸಿ ನಂ.1062ನೇದ್ದರಲ್ಲಿ ಸಾರ್ವಜನಿಕ ತಾಲಿಮು ಖಾನಾ ವ್ಯಾಯಾಮ ಶಾಲೆ ಹೆಸರನ್ನು ದಾಖಲು ಮಾಡಿದ ಬಗ್ಗೆ ಠರಾವು ಅಥವಾ ಆದೇಶ ಏನಾದರು ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಅಸಲು ದಾವಾ ನಂ.21/1977 ಇದು ತೀರ್ಪು ಆದ ನಂತರ ನಾವು ಸಾರ್ವಜನಿಕ ತಾಲಿಮು ಖಾನಾ ವ್ಯಾಯಾಮ ಶಾಲೆ ಹೆಸರನ್ನು ಕಾನೂನುಬಾಹಿರವಾಗಿ ಸೇರಿದ್ದೆವೆ ಎಂದರೆ ಸರಿಯಲ್ಲ. ನಾನು ದಿನಾಂಕಃ 05-09-2023 ರಿಂದ ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದೆನೆ ಅದಕ್ಕಿಂತ ಮೊದಲು ಯಾವಾಗ ಯಾವಾಗ ಸದರಿ ಹೆಸರುಗಳನ್ನು ದಾಖಲೆಗಳಲ್ಲಿ ಸೇರಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾವುದೇ ದಾಖಲಾತಿ ಇಲ್ಲದೆ ದಾಖಲೆಗಳಲ್ಲಿ ಹೆಸರನ್ನು ಸೇರಿಸಿದ್ದರೆ ಅದು ಕಾನೂನುಬಾಹಿರ ಎಂದರೆ ಸರಿ. ಅಸಲು ದಾವಾ ನಂ.21/1977 ರಲ್ಲಿಯ ನಿಪಿ.22 ರಂತೆ ಪಟ್ಟಣ ಪಂಚಾಯತಿಯಿಂದ ಸಾರ್ವಜನಿಕ ತಾಲಿಮು ಖಾನಾ ವ್ಯಾಯಾಮ ಶಾಲೆ ಹೆಸರನ್ನು ತೆಗೆದು ಹಾಕಿ ದಾಖಲೆ ನೀಡಿದ್ದರು ಸಹ ನಂತರ ದಾಖಲೆಯ ಅನುಬೋಗದಾರ ಕಾಲಂ ನಲ್ಲಿ ಸಾರ್ವಜನಿಕ ವ್ಯಾಯಾಮ ಶಾಲೆ ಎಂದು ಸೇರ್ಪಡೆ ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**